**1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ**
**ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು , ದ.ಕ.**

ಸಿ.ಸಿ. ನಂಃ 500/2022
ಸಿ.ಡಬ್ಲ್ಯೂಃ 5
ಪಿ.ಡಬ್ಲ್ಯೂಃ 5

| | |
|---|---|
| ಸಾಕ್ಷಿದಾರರ ಹೆಸರುಃ | ಶ್ರೀ. ಸತ್ಯೇಶ್ |
| ತಂದೆಯ ಹೆಸರುಃ | ದಿಃ ಪ್ರೇಮ್ ನಾಥ್ |
| ವಯಸ್ಸುಃ | 54 ವರ್ಷ |
| ಉದ್ಯೋಗಃ | ಪ್ರಭಾರ ಉಪನೋಂದಾಣಾಧಿಕಾರಿ , ಸುಳ್ಯ ಉಪನೋಂದಾಣಾಧಿಕಾರಿ ಕಚೇರಿ |
| ವಾಸಸ್ಥಳಃ | ಪುತ್ತೂರು |

ದಿನಾಂಕ 03-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2020 ರಿಂದ 2025 ರ ವರೆಗೆ ಪುತ್ತೂರು ಉಪನೋಂದಾಣಾಧಿಕಾರಿ ಕಚೇರಿಯಲ್ಲಿ ಪ್ರ. ದರ್ಜೆ ಸಹಾಯಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ಪ್ರಸ್ತುತ ಪ್ರಕರಣದ ಘಟನೆ ನಡೆಯುವ ಕಾಲಕ್ಕೆ ನಾನು ಉಪನೋಂದಾಣಾಧಿಕಾರಿ ಕಚೇರಿ ಪುತ್ತೂರಿನಲ್ಲಿ ಪ್ರಭಾರ ಉಪನೋಂದಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ಸಾಕ್ಷಿಗೆ ಸ್ವತ್ತು ಸ್ವಾಧೀನತಾ ಮಹಜರು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿ.ಪಿ.16 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ.16(ಎ) ಎಂದು ಗುರುತಿಸಲಾಯಿತು.

3. ನಿ.ಪಿ.16 ಕ್ಕೆ ದಿನಾಂಕ 10-02-2022 ರಂದು ಪುತ್ತೂರಿನ ಉಪನೋಂದಾಣಾಧಿಕಾರಿ ಕಚೇರಿಯಲ್ಲಿ ಸಹಿ ಮಾಡಿದ್ದೇನೆ. ಆ ದಿನ ಪುತ್ತೂರು ಗ್ರಾಮಾಂತರ ಪೊಲೀಸು ಠಾಣೆಯ ಪಿಎಸ್ ಐ ರವರು ಕಚೇರಿಗೆ ಬಂದಿದ್ದರು. ಆ ದಿನ ಪಿ ಎಸ್ ಐ ರವರು ಕಚೇರಿಯಲ್ಲಿ ಮೂಲ ಹೆಬ್ಬೆಟಿನ ಗುರುತಿನ ರಿಜಿಸ್ಟರ್ ವಹಿಯನ್ನು ಮತ್ತು ಅದರಲ್ಲಿನ Vol. No 233 ಪುಟಸಂಖ್ಯೆ1 ರಿಂದ 49 ರಲ್ಲಿ ಕ್ರ. ಸಂಖ್ಯೆ13 ರನ್ನು ಮಹಜರು ಮಾಡಿ ತಮ್ಮ ವಶ ಪಡೆದರು. ಅದು 1993 ರ ಸಾಲಿನ ದಾಖಲೆಯಾಗಿರುತ್ತದೆ. ಪೊಲೀಸರ ಜೊತೆ ಬಂದ ಇಬ್ಬರು ಸಾಕ್ಷಿಗಳು ನನ್ನ ಜೊತೆ ನಿ.ಪಿ.16 ಕ್ಕೆ ಸಹಿ ಮಾಡಿದ್ದಾರೆ. ನಾನು

ತಿಳಿಸಿದ ಹೆಬ್ಬೆಟ್ಟಿನ ರಿಜಿಸ್ಟರ್ ವಹಿಯ ದೃಢೀಕೃತ ನಕಲನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು Vol. No 233 ಪುಟ ಸಂಖ್ಯೆ1 ರಿಂದ 49 ಪುಟಗಳ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.17 ಎಂದು ಗುರುತಿಸಲಾಯಿತು. ನಿ.ಪಿ.17 ರಲ್ಲಿನ 13ನೇ ಪುಟದಲ್ಲಿರುವ ಮುಮುಟ್ಟೆ ಬ್ಯಾರಿ ಎನ್ನುವವರ ಹೆಬ್ಬೆಟ್ಟಿನ ಗುರುತಿನ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು ಸದರಿ ಹೆಬ್ಬೆಟ್ಟಿನ ಗುರುತನ್ನು ನಿ.ಪಿ.17(ಎ) ಎಂದು ಗುರುತಿಸಲಾಯಿತು. Vol. No 233 ದಿನಾಂಕ 02-03-1993 ರಿಂದ 29-03-1993 ರ ವರೆಗೆ ಸೇರಿದ ದಾಖಲೆ ಆಗಿರುತ್ತದೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಡಿ.ಪಿ.ಆರ್. ವಕೀಲರಿಂದಃ</u>**

4. ಮಹಜರು ಕಾಲದಲ್ಲಿ ಹಾಜರು ಇರಬೇಕೆಂದು ಪೊಲೀಸರು ನನಗೆ ನೋಟೀಸು ಕೊಟ್ಟಿರಲಿಲ್ಲ. ಮಹಜರನ್ನು ಪೊಲೀಸರು ನಮ್ಮ ಕಚೇರಿಯಲ್ಲಿ ಮಾಡಿರುತ್ತಾರೆ. ಮಹಜರನ್ನು ನಮ್ಮ ಕಚೇರಿಯಲ್ಲಿಯೇ ಪೊಲೀಸರು ತಂದಿದ್ದ ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿದ್ದಾರೆ. ಟೈಪ್ ಮಾಡಿದ ವಿಚಾರಗಳನ್ನು ನನಗೆ ಓದಿ ಹೇಳಿದ್ದಾರೆ. ಪೊಲೀಸರು ನಿ.ಪಿ.16 ರಲ್ಲಿ ನಮೂದಿಸಿರುವ ದಾಖಲೆಯನ್ನು ತಮ್ಮ ವಶಕ್ಕೆ ಪಡೆದ ನಂತರ ಪೇಪರ್ ಕವರಿನಲ್ಲಿ ಭದ್ರಪಡಿಸಿ SHO ಅರಗು ಸೀಲು ಹಾಕಿ, ಪಂಚರ , ಪ್ರ.ದ. ಸಹಾಯಕರ ಹಾಗೂ ತನಿಖಾಧಿಕಾರಿಯ ಸಹಿ ಇರುವ ಚೀಟಿಯನ್ನು ಅಂಟಿಸಿ ' ಎ' ಎಂದು ಗುರುತು ನೀಡಿದ ಪಿಎಸ್ ಐ ರವರು ತಮ್ಮ ವಶ ಪಡೆದರು. ಅದರ ಬಗ್ಗೆ ನಿ.ಪಿ.16 ರಲ್ಲಿ ಉಲ್ಲೇಖ ಇದೆ. ನಿ.ಪಿ.16 ಕ್ಕೆ ಅಬ್ದುಲ್ಲಾ ಮತ್ತು ಸಫುದ್ದೀನ್ ರವರು ಸಾಕ್ಷಿಗಳಾಗಿ ಸಹಿ ಮಾಡಿದ್ದರು. ನಿ.ಪಿ.16 ರಲ್ಲಿ ನಮೂದಿಸಿರುವ ದಾಖಲೆಯನ್ನು ಪೊಲೀಸರಿಗೆ ನಾನೇ ಕೊಟ್ಟಿದ್ದೇನೆ.

5.ನಿ.ಫಿ17 ರಲ್ಲಿ ನಮೂದಿಸಲಾಗಿರುವ ದಸ್ತಾವೇಜುಗಳು ಕ್ರಮಸಂಖ್ಯೆ ಸೀರಿಯಲ್ ಪ್ರಕಾರ ಇರುವುದಿಲ್ಲ. ನಾನು ಗುರುತಿಸಿದ ನಿ.ಪಿ.17(ಎ) ಕೆಳಗೆ ತಿದ್ದುಪಡಿ ಆಗಿದ್ದು ಅದನ್ನು ಯಾರು ಮಾಡಿದ್ದು ಎಂದು ಗೊತ್ತಿಲ್ಲ. ನಿ.ಪಿ.17(ಎ) ರಲ್ಲಿ ಮುಮುಟ್ಟೆ ಬ್ಯಾರಿ ಎಂದು ಹೆಸರಿರುವ ಮೇಲೆ ದಿನಾಂಕ 10-02-1991 ಎಂದು ನಮೂದಾಗಿದೆ ಎಂದರೆ ಸರಿ ಅದನ್ನು ಯಾರು ಬರೆದರು ಎಂದು ಗೊತ್ತಿಲ್ಲ.

6. ನನ್ನ ಸಮ್ಮುಖ ನಿ.ಪಿ.16 ದಾಖಲೆಯನ್ನು ಪೊಲೀಸರು ಬರೆದಿಲ್ಲ ಮತ್ತು ಆ ಸಮಯದಲ್ಲಿ ನಾನು ನಿ.ಪಿ17 ರ ದಾಖಲೆಯನ್ನು ಪೊಲೀಸರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿ, ಪುತ್ತೂರು ದ.ಕ.